ದಿನಾಂಕ **09.07.2026** ರಂದು ಪಿ.ಡಬ್ಲ್ಯೂ**-1** ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**.**

ಪಾಟೀ ಸವಾಲುಃ **1**ನೇ ಎದುರುದಾರರ ಪರ ವಕೀಲರಿಂದಃ**-**

ಟಿವಿಎಸ್ ವಾಹನ ಅಪಘಾತವಾದಾಗ ನನ್ನ ಹೆಸರಿನಲ್ಲೇ ಇತ್ತು. ನನ್ನ ವಾಹನಕ್ಕೆ ವಿಮಾ ಪಾಲಿಸಿ ಇದೆ. ಅಪಘಾತವಾದಾಗ ಟಿವಿಎಸ್ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆ. ಅಪಘಾತವಾದಾಗ ನನಗೆ ಚಾಲನಾ ಪರವಾನಿಗೆ ಇರಲಿಲ್ಲ. ನಾನು ಮದರಖಂಡಿಯಿಂದ ಬರುತ್ತಿದ್ದೆ ಎಂದರೆ ಸರಿ. ನನ್ನ ಪಕ್ಕದಲ್ಲಿ 1ನೇ ಎದುರುದಾರರ ವಾಹನ ಬರುತ್ತಿತ್ತು ಎಂದರೆ ಸರಿಯಲ್ಲ.

ನಾನು ರಸ್ತೆಯನ್ನು ದಾಟಿಕೊಂಡು ಹೋಗುತ್ತಿರುವಾಗ ಅಪಘಾತ ಆಗಿದೆ. ನಾನು ಸ್ವಾಮಿ ಪೆಟ್ರೋಲ್ ಬಂಕನಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳಲು ಹೋಗುತ್ತಿದ್ದೆ ಎಂದರೆ ಸರಿ. ರಸ್ತೆಯನ್ನು ಕ್ರಾಸ್ ಮಾಡಿ ಪೆಟ್ರೋಲ್ ಬಂಕಗೆ ಹೋಗಬೇಕು ಎಂದರೆ ಸರಿ. ಮದರಖಂಡಿ ರಸ್ತೆ 30 ಅಡಿ ಅಗಲವಿದೆ ಎಂದರೆ ಸರಿ. ನಾನು ಯಾವುದೇ ಸೂಕ್ತ ಸೂಚನೆಗಳನ್ನು ಕೊಡದೇ ನನ್ನ ವಾಹನವನ್ನು ತಿರುಗಿಸಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರ ವಾಹನಕ್ಕೆ ನಾನೇ ಹೋಗಿ ಹಾಯಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿಯಲ್ಲ. 1ನೇ ಎದುರುದಾರರು ತನ್ನ ಬದಿಯಲ್ಲಿ ನಿಧಾನವಾಗಿ ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದಳು ಎಂದರೆ ಸರಿಯಲ್ಲ. ನಾನೇ ವಾಹನವನ್ನು ಜೋರಾಗಿ ಚಾಲನೆ ಮಾಡಿಕೊಂಡು ಹೋಗಿ ಆಕೆಯ ವಾಹನಕ್ಕೆ ಹಾಯಿಸಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರಿಗೆ ಮತ್ತು ಆಕೆಯ ಹಿಂದೆ ಕುಳಿತ್ತಿದ್ದ ವ್ಯಕ್ತಿಗೆ ಕೂಡಾ ಗಾಯಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಸಂಗಪ್ಪ ಉಪ್ಪಲದಿನ್ನಿ ಇವರು 108 ಅಂಬುಲನ್ಸನಲ್ಲಿ ಆಸ್ಪತ್ರೆಗೆ ಸಾಗಿಸಿದರು. ಆತ ನಮ್ಮ ಊರಿನ ವ್ಯಕ್ತಿ ಎಂದರೆ ಸರಿ. ಅವರ ಮಗ ಪೋಲಿಸ್ ಇಲಾಖೆಯಲ್ಲಿ ಸಬ್ ಇನ್ಸಪೆಕ್ಟರ್ ಎಂದು ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ಆತನ ಸಹಾಯದಿಂದ ಖೊಟ್ಟಿ ಫಿರ್ಯಾದಿಯನ್ನು ನಾನೇ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಖೊಟ್ಟಿಯಾಗಿ ಪರಿಹಾರ ಪಡೆದುಕೊಳ್ಳಲು, ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಣ್ಣು ಮಗಳ ಮೇಲೆ ಖೊಟ್ಟಿ ಅಂತಿಮ ವರದಿ ದಾಖಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಮೀನು ಇದ್ದ ಬಗ್ಗೆ ಮತ್ತು ನನ್ನ ಆದಾಯದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಅಪಘಾತವು ಸಂಪೂರ್ಣ ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ. ನನ್ನ ವಯಸ್ಸನ್ನು ಸಾಬೀತುಪಡಿಸಲು ದಾಖಲೆ ಕೊಟ್ಟಿದ್ದೇನೆ. ನನಗೆ ಅಪಘಾತದ ಕಾಲಕ್ಕೆ 60 ಕ್ಕಿಂತ ಜಾಸ್ತಿ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ 40 ಸಾವಿರ ರೂಪಾಯಿ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಒಕ್ಕಲುತನ ಮತ್ತು ಒಕ್ಕಲುತನ ಕೂಲಿಯಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಒಂದು ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಿಕಿತ್ಸೆಗೆ 2 ಲಕ್ಷ ರೂಪಾಯಿ ವ್ಯಯ ಆಗಿದೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಭವಿಷ್ಯತ್ತಿನಲ್ಲಿ ಚಿಕಿತ್ಸೆಗೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಯಾವುದೇ ತರಹದ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಅಪಘಾತ ಆಗಿದೆ, 1ನೇ ಎದುರುದಾರರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆದುಕೊಳ್ಳಲು ಸುಳ್ಳು ದೂರನ್ನು ಕೊಟ್ಟು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೈಸನ್ಸ್ ಇಲ್ಲದ ನನಗೆ ಸರಿಯಾಗಿ ವಾಹನ ಚಾಲನೆ ಬರುತ್ತಿರಲಿಲ್ಲ, ಆ ಕಾರಣಕ್ಕೆ ನಾನೇ ಅಪಘಾತಪಡಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **2**ನೇ ಎದುರುದಾರರ ಪರ ವಕೀಲರಿಂದಃ**-**</u>

ಅಪಘಾತವಾದ ಸಮಯದಲ್ಲಿ ನನ್ನ ವಾಹನ, 1ನೇ ಎದುರುದಾರರ ವಾಹನ ಮತ್ತು ಇನ್ನೊಂದು ವಾಹನ ಕೂಡಾ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ದೂರನ್ನು ನಾನೇ ಪೋಲಿಸರಿಗೆ ಕೊಟ್ಟಿದ್ದೇನೆ. ದೂರಿನಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇದೆ. ರಸ್ತೆಯನ್ನು ದಾಟಬೇಕಾದರೆ ನಾನು ಸೂಕ್ತ ಸೂಚನೆಗಳನ್ನು ಅಂದರೆ ಸಿಗ್ನಲ್‌ಗಳನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ಆ ರೀತಿ ನಾನು ಸಿಗ್ನಲಗಳನ್ನು ಕೊಟ್ಟಿದ್ದೆ ಎಂದು ದೂರಿನಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅಂತಿಮ ವರದಿಯಲ್ಲಿ ಕೂಡಾ ಈ ಬಗ್ಗೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸೂಕ್ತ ಸೂಚನೆಗಳನ್ನು ಕೊಟ್ಟು ನನ್ನ ವಾಹನವನ್ನು ಚಾಲನೆ ಮಾಡಿದ್ದರೆ, ಅಪಘಾತವೇ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಂಪೂರ್ಣ ಅಪಘಾತಕ್ಕೆ ನಾನೇ ಹೊಣೆಗಾರ ಎಂದರೆ ಸರಿಯಲ್ಲ. ಇನ್ನೊಂದು ಯಾವುದೋ ವಾಹನ ಬಂದು ನನ್ನ ವಾಹನಕ್ಕೆ ಹಾಯಿಸಿ ಹೊರಟು ಹೋಗಿದೆ, 1ನೇ ಎದುರುದಾರರ ವಾಹನದ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರಿಗೆ ಅಪಘಾತವಾದ ದಿವಸ ಚಾಲನಾ ಪರವಾನಿಗೆ ಇರಲಿಲ್ಲ ಎಂದು ಪೋಲಿಸರು ಅಂತಿಮ ವರದಿಯಲ್ಲಿ ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೂ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿ. ಚಾಲನಾ ಪರವಾನಿಗೆ ಇಲ್ಲದ ಕಾರಣ ನನಗೆ ರಸ್ತೆಯ ನಿಯಾಮಾವಳಿಗಳು ಯಾವುದು ಗೊತ್ತಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೆಡಿಕಲ್ ಬಿಲ್ಲುಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

VAIDYA SHREEKANT Digitally signed by VAIDYA SHREEKANT Date: 2026.07.10 10:53:45 +0530

ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.